## ▶ ಎನ್‌ಐಟಿಕೆಯಲ್ಲಿ ಉಂಗುರ ಪ್ರದಾನ

# ಶಿಕ್ಷಣ ಸಂಸ್ಥೆಯಲ್ಲಿ ವಿಶಿಷ್ಟ ಸಂಪ್ರದಾಯ

**ಸುರತ್ಕಲ್, ಎ. 2:** ಉಂಗುರ ಪ್ರದಾನವು ಎನ್‌ಐಟಿಕೆ ಸುರತ್ಕಲ್‌ನ ವಿಶಿಷ್ಟ ಸಂಪ್ರದಾಯಗಳಲ್ಲಿ ಒಂದು. ಅದರಂತೆ ಪ್ರತೀ ವರ್ಷ ಬಿಟೆಕ್, ಎಂಟೆಕ್, ಎಂಸಿಎ, ಎಂಬಿಎ, ಎಂಎಸ್ಸಿ, ಎಂಟೆಕ್ ರಿಸರ್ಚ್ ಮತ್ತು ಪಿಎಚ್‌ಡಿ ಸಹಿತ ಪ್ರತೀ ಪದವೀಧರರಿಗೆ ಬೆಳ್ಳಿಯ ಉಂಗುರವನ್ನು ನೀಡಲಾಗುತ್ತದೆ.

ಉಂಗುರದಲ್ಲಿ ಎನ್‌ಐಟಿಕೆ ಲಾಂಛನ ಮತ್ತು ಪದವಿ ಪಡೆದ ವರ್ಷವನ್ನು ಕೆತ್ತಲಾಗಿದ್ದು, ಇಲ್ಲಿನ ಪದವೀಧರರಿಗೆ ಅದನ್ನು ಧರಿಸುವುದೇ ಹೆಮ್ಮೆಯ ವಿಷಯ. ಪ್ರಸಕ್ತ ಸಾಲಿನ ಉಂಗುರ ಪ್ರದಾನ ಸಮಾರಂಭ ಮಾ. 28ರಂದು ನೆರವೇರಿತು. ಪ್ರಾಧ್ಯಾಪಕರು ವಿದ್ಯಾರ್ಥಿಗಳನ್ನು ಅತಿಥಿಗಳಂತೆ ಪರಿಗಣಿಸಿ ಪ್ರತಿಯೊಬ್ಬರಿಗೂ ವೈಯಕ್ತಿಕವಾಗಿ ಉಂಗುರ ತೊಡಿಸಿ ಶುಭ ಹಾರೈಸಿದರು.



> ಇದೊಂದು ವಿಶಿಷ್ಟ ಕಾರ್ಯಕ್ರಮ. ಎನ್‌ಐಟಿಕೆ ವಿದ್ಯಾರ್ಥಿಗಳ ಬಾಂಧವ್ಯ ಬೆಸೆಯುವ ಈ ವಿಶೇಷ ಪದ್ಧತಿಗೆ ಅಡಿಪಾಯ ಹಾಕಿಕೊಟ್ಟವರನ್ನು ಸ್ಮರಿಸುವುದು ನಮ್ಮ ಕರ್ತವ್ಯ. ಶಿಕ್ಷಣ ಪಡೆದ ಸಂಸ್ಥೆಯನ್ನು ಸದಾ ಸ್ಮರಿಸುತ್ತ ಒಂದಿಷ್ಟು ನೆರವು ನೀಡುವುದನ್ನು ಹಿರಿಯ ವಿದ್ಯಾರ್ಥಿಗಳು ಮುಂದುವರಿಸಿದರೆ ಹಾಲಿ ವಿದ್ಯಾರ್ಥಿಗಳಿಗೆ ಉಪಯೋಗವಾಗುವ ಸೌಲಭ್ಯ ಒದಗಿಸಲು ಸಹಕಾರಿಯಾದೀತು.
>
> -ಪ್ರೊ| ಬಿ. ರವಿ, ಎನ್‌ಐಟಿಕೆ ಸುರತ್ಕಲ್ ನಿರ್ದೇಶಕ

### 50 ವರ್ಷಗಳ ಇತಿಹಾಸ

ದೇಶದ ಇತರ ಯಾವುದೇ ವಿದ್ಯಾಸಂಸ್ಥೆಯಲ್ಲಿ ಇಂತಹ ಕ್ರಮ ಚಾಲ್ತಿಯಲ್ಲಿಲ್ಲ. ಉಂಗುರ ಪ್ರದಾನ ಪದ್ಧತಿಯನ್ನು ಈ ಹಿಂದಿನ ಕರ್ನಾಟಕ ಪ್ರಾದೇಶಿಕ ಎಂಜಿನಿಯರಿಂಗ್ ಕಾಲೇಜು (ಕೆಆರ್‌ಇಸಿ) ಪ್ರಾಂಶುಪಾಲ ಪ್ರೊ| ಎ.ಎಸ್. ಅಡ್ಕೆ 50 ವರ್ಷಗಳ ಹಿಂದೆ ಪ್ರಾರಂಭಿಸಿದ್ದರು. ಪ್ರಪಂಚದೆಲ್ಲೆಡೆಯ ವಿದ್ಯಾರ್ಥಿಗಳು ಇಲ್ಲಿ ಕಲಿಯುತ್ತಿದ್ದು, ಪರಸ್ಪರ ಬಾಂಧವ್ಯ ಉಳಿಸಿಕೊಳ್ಳಲು ಹಾಗೂ ಸಂಸ್ಥೆಯ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸಲು ಸಹಕಾರಿ ಎಂಬ ಚಿಂತನೆ ಈ ಪದ್ಧತಿಯ ಹಿಂದೆ ಇದೆ. ಚಿನ್ನದ ಪದಕ ವಿಜೇತರೂ ಈ ಉಂಗುರ ಸಹಿತ ಪ್ರಮಾಣ ಪತ್ರವನ್ನು ಪಡೆಯುತ್ತಾರೆ.

ಈ ವಿಶಿಷ್ಟ ಸಂಪ್ರದಾಯಕ್ಕೆ ಎನ್‌ಐಟಿ ಸುರತ್ಕಲ್‌ನಿಂದ ವರ್ಗವಾಗಿ ಹೋದ ನಿರ್ದೇಶಕರುಗಳು ತಾವು ಹೋದ ಕಾಲೇಜುಗಳಲ್ಲಿ ಈ ಹೊಸ ಸಂಪ್ರದಾಯ ಹುಟ್ಟು ಹಾಕಿ ವಿದ್ಯಾರ್ಥಿಗಳಲ್ಲಿ ಕಾಲೇಜಿನ ಬಗೆಗೆ ಹೆಚ್ಚಿನ ಭಾವನಾತ್ಮಕ ಸಂಬಂಧ ಬೆಸೆಯಲು ಕಾರಣರಾಗಿದ್ದಾರೆ.

Udayavani, Date:03/04/24, p. no - 04_ Sudina